ಓ ಪ್ರಿಯಾ, ನೀ ಕೇಳು ನನ್ನ ಹೃದಯದ ಕಥೆಯನ್ನು;
ನಿನ್ನ ರೂಪಕ್ಕೆ ವಶಳಾಗಿದ್ದೇನೆ; ಅಪಖ್ಯಾತಿಯನ್ನೂ ನಾನು ಸಹಿಸುತ್ತೇನೆ. 1
ಓ ದೇವಾ, ನಿನ್ನನ್ನು ಪೂಜಿಸುತ್ತಾ, ನಮಾಜ಼್ ಮಾಡಲೂ ನಾನು ಮರೆತಿದ್ದೇನೆ;
ಕುರ್–ಆನ್ ಪಠಿಸುವುದನ್ನು ತ್ಯಜಿಸಿ, ನಿನ್ನ ಗುಣಗಾನವನ್ನು ಮಾಡುತ್ತಿದ್ದೇನೆ. 2
ಎಲ್ಲರ ಶಿರೋಮಣಿ, ಅತ್ಯಂತ ಗೌರವಾಸ್ಪದನಾದವನು ನೀ;
ನಾನೀಗ ನಿನ್ನ ಭಕ್ತೆಯಾಗುತ್ತೇನೆ, ಯಾವ ಸ್ವಾರ್ಥವೂ ಇಲ್ಲದೆ. 3
ಓ ನಂದಕುಮಾರ, ನಿನ್ನ ಸುಂದರ ಮುಖಕ್ಕೆ ನನ್ನನ್ನು ನಾನು ಅರ್ಪಿಸಿಕೊಂಡಿದ್ದೇನೆ ;
ನಾನು ಮುಘಲಾನಿಯಾದರೂ ಹಿಂದುವಾನಿಯಾಗಿಯೇ ಇರುತ್ತೇನೆ. 4

2. ಕೋಯೀ ಜನ್ ಸೇವೈಶಾ ರಾಜಾ ರಾವ್ ಠಾಕೂರ್ ಕೋ
ಕೆಲವರು ಪೂಜಿಸುತ್ತಾರೆ ರಾಜ–ಮಹಾರಾಜರನ್ನು, ತಮ್ಮ ಒಡೆಯರನ್ನು;
ಮತ್ತೆ ಕೆಲವರು ಪೂಜಿಸುತ್ತಾರೆ ಭೈರವನನ್ನು, ತಮ್ಮ ಇಷ್ಟಾಪೂರ್ತಿಗಾಗಿ. 1
ಕೆಲವರು ಪೂಜಿಸುತ್ತಾರೆ ಪ್ರಚಂಡ ಬಲದ ಚಂಡಿಯನ್ನು;
ಮತ್ತೆ ಕೆಲವರು ಪೂಜಿಸುತ್ತಾರೆ ದೇವತೆಗಳಲ್ಲೇ ಅಗ್ರಮಾನ್ಯ ಗಣಪತಿಯನ್ನು. 2
ಕೆಲವರು ಪೂಜಿಸುತ್ತಾರೆ ಭೂತಪ್ರೇತಗಳನ್ನು ತಮ್ಮ ಭೌತಿಕ ಕಾಮನೆಗಳಿಗಾಗಿ;
ಮತ್ತೆ ಕೆಲವರು ಪೂಜಿಸುತ್ತಾರೆ ಕಂಡ ಕಂಡವರನ್ನು ತಮ್ಮ ಕ್ಷಣಿಕ ಸುಖಕ್ಕಾಗಿ. 3
ಕೆಲವರು ಪೂಜಿಸುತ್ತಾರೆ ಶಂಕರನನ್ನು ವ್ರತೋಪವಾಸಗಳಿಂದ;
ಆದರೆ, ನಾನು ಪೂಜಿಸುವುದು ನಂದಸುತ ಶ್ರೀಕೃಷ್ಣನನ್ನು ಮಾತ್ರ. 4



3. ಛೈಲ್ ಜೋ ಛಬೀಲಾ, ಸಬ್ ರಂಗ್‌ಮೆ ರಂಗೀಲಾ...
ಸುಂದರ ಕುಮಾರ, ವಿವಿಧ ವರ್ಣ ರಂಜಿತ,
ಮಹಾ ಹಟವಾದಿ, ದೇವ–ದೇವತೆಗಳಲ್ಲಿ ಅನುಪಮ. 1
ಹೂ ಹಾರದಿಂದ ಮೋಹಕ ಕತ್ತು, ಮುತ್ತಿನ ಮೂಗುತಿಯಿರುವ ಮೂಗು,
ಮನಮೋಹಕ ಕುಂಡಲಗಳು ಕಿವಿಯಲ್ಲಿ, ತಲೆಯ ಮೇಲೆ ಕೆಂಪು ಕಿರೀಟ. 2
ದುಷ್ಟಜನ ಸಂಹಾರಿ, ಶಿಷ್ಟಜನ ಪಾಲಕ,
ಪ್ರೇಮಾರ್ದ್ರ ಹೃದಯಿ, ಭಕ್ತಜನ ಪೋಷಕ. 3
ನಂದನ ಮುದ್ದಿನ ಮಗ, ದುಷ್ಟ ಕಂಸನನ್ನು ಮಡುಹಿದವ,
ವೃಂದಾವನವಾಸಿ, ಕೃಷ್ಣ, ನನ್ನವ, ನನ್ನ ಒಡೆಯ. 4

4. ಬಿಧಿ ಕೋ ಭರೋಸೋ ಸಬ್, ಸೃಷ್ಟಿ ಕೆ ಬನಾಯಬೆ ಕೋ...
ವಿಧಿಯನ್ನು (ಬ್ರಹ್ಮನನ್ನು) ನಂಬುತ್ತೇವೆ ನಾವು, ಸಕಲ ಸೃಷ್ಟಿಯ ಕರ್ತನೆಂದು;
ಶಿವನನ್ನು ನಂಬುತ್ತೇವೆ ನಾವು, ಸಕಲ ಸೃಷ್ಟಿಯ ವಿನಾಶಕಾರಕನೆಂದು; 1
ಇಂದ್ರನನ್ನು ನಂಬುತ್ತೇವೆ ನಾವು, ಮೇಘಗಳಿಂದ ಮಳೆ ಸುರಿಸುತ್ತಾನೆಂದು;
ದೇವತೆಗಳನ್ನು ನಂಬುತ್ತೇವೆ ನಾವು, ಅವರು ಅಮರಾವತಿಯ ನಿವಾಸಿಗಳೆಂದು; 2
ಸಮುದ್ರವನ್ನು ನಂಬುತ್ತೇವೆ ನಾವು, ಅದು ಶ್ರೇಷ್ಠ ರತ್ನಗಳ ಆಗರವೆಂದು;
ಆದಿಶೇಷನನ್ನು ನಂಬುತ್ತೇವೆ ನಾವು, ಅವನು ಇಡೀ ವಿಶ್ವವನ್ನು ಹೊರುತ್ತಾನೆಂದು; 3
ವಾಯುವನ್ನು ನಂಬುತ್ತೇವೆ ನಾವು, ಅವನು ಎಲ್ಲೆಡೆಯೂ ಚಲಿಸಬಲ್ಲನೆಂದು.